# ಭಾರತೀಯ ವಾಯು ಸೇನೆಯಲ್ಲಿ ವಿಫುಲ ಅವಕಾಶ: ಸಂಜಯ್ ದೇಸಾಯಿ

**ಹಳಿಯಾಳ:** ತಾಂತ್ರಿಕ ಪದವಿ ವಿದ್ಯಾರ್ಥಿಗಳಿಗೆ ಭಾರತೀಯ ವಾಯು ಸೇನೆಯಲ್ಲಿ ವಿಫುಲ ಅವಕಾಶವಿದೆ ಎಂದು ಭಾರತೀಯ ವಾಯು ಸೇನೆ ನವದೆಹಲಿಯ ಗ್ರೂಪ್ ಕ್ಯಾಪ್ಟನ್ ಸಂಜಯ್ ದೇಸಾಯಿ ಹೇಳಿದರು.

ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ ಭಾರತೀಯ ವಾಯುಸೇನೆಯಲ್ಲಿ ಭವಿಷ್ಯ ರೂಪಿಸಿಕೊಳ್ಳಲು ಇರುವ ಅವಕಾಶಗಳ ಕುರಿತು ತಿಳಿಸುವ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಭಾರತೀಯ ವಾಯು ಸೇನೆಗೆ ಅರ್ಹ ರಾಗಲು ಎಫ್ ಕ್ಯಾಟ್, ಯು ಪಿ ಎಸ್ ಸಿ, ಎನ್ ಸಿಸಿ ವಿಶೇಷ ಎಂಟ್ರಿ, ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂದು ಹೇಳಿದರು. ಈ ಎಲ್ಲಾ ಪರೀಕ್ಷೆಗಳಿಗೆ ಕಠಿಣ ಪರಿಶ್ರಮದಿಂದ ಸಿದ್ಧತೆ ನಡೆಸಬೇಕೆಂದು ಹೇಳಿದರು. ಭಾರತೀಯ ವಾಯು ಸೇನೆಯ ಸಾಧನೆಗಳು ಹಾಗೂ ಸೇನೆಯು ಒದಗಿಸುವ ಸೌಲಭ್ಯಗಳ ಕುರಿತು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ, ವಿದ್ಯಾರ್ಥಿಗಳು ಭಾರತೀಯ ಸೇನಾ ಪ್ರವೇಶಾತಿ ಪರೀಕ್ಷೆಗೆ ಉತ್ತಮ ಸಿದ್ಧತೆ ನಡೆಸಿ ಉತ್ತೀರ್ಣರಾಗಿ ಸೇನೆಯಲ್ಲಿ ಸೇವೆಸಲ್ಲಿಸಿ ದೇಶಕ್ಕೆ ಕೊಡುಗೆ ನೀಡುವಂತೆ ಹೇಳಿದರು.



ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್ ಸ್ವಾಗತಿಸಿದರು. ಟ್ರೈನಿಂಗ್ ಅಂಡ್ ಪ್ಲೇಸ್ಮೆಂಟ್ ಸಂಚಾಲಕ ಪ್ರೊ. ರಜತ್ ಆಚಾರ್ಯ ವಂದಿಸಿದರು. ಪ್ರೊ. ಪೂಜಾ ಶಿಂದೆ ನಿರೂಪಿಸಿದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗ, ಆವಿಷ್ಕಾರ ಪರಿಷತ್ತು ಮತ್ತು ಪ್ಲೇಸ್ಮೆಂಟ್ ಘಟಕದ ಜಂಟಿ ಆಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 200ಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಭಾರತೀಯ ವಾಯು ಸೇನೆಯ ನವದೆಹಲಿಯ ಗ್ರೂಪ್ ಕ್ಯಾಪ್ಟನ್ ದೇಸಾಯಿ

# ಗೆಲುವಿಗೆ ಕಠಿಣ ಪರಿಶ್ರಮ, ಸಿದ್ಧತೆ ಅಗತ್ಯ

ಪ್ರಜಾವಾಣಿ ವಾರ್ತೆ

ಹಳಿಯಾಳ: 'ವಿದ್ಯಾರ್ಥಿಗಳು ಕಠಿಣ ಪರಿಶ್ರಮ ಹಾಗೂ ಪರೀಕ್ಷಾ ಸಿದ್ಧತೆ ಮಾಡಿಕೊಂಡರೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಭವಿಷ್ಯದಲ್ಲಿ ಗುರಿ ತಲುಪಲು ಸಾಧ್ಯ' ಎಂದು ಭಾರತೀಯ ವಾಯು ಸೇನೆಯ ನವದೆಹಲಿಯ ಗ್ರೂಪ್ ಕ್ಯಾಪ್ಟನ್ ಸಂಜಯ್ ದೇಸಾಯಿ ಹೇಳಿದರು.

ಇಲ್ಲಿನ ಕರ್ನಾಟಕ ಲಾ ಸೊಸೈಟಿ ವಿಶ್ವನಾಥರಾವ್ ದೇಶಪಾಂಡೆ ತಾಂತ್ರಿಕ ವಿದ್ಯಾಲಯದಲ್ಲಿ ಸೋಮವಾರ ನಡೆದ 'ಭಾರತೀಯ ವಾಯುಸೇನೆಯಲ್ಲಿ ಭವಿಷ್ಯ ರೂಪಿಸಿಕೊಳ್ಳಲು ಇರುವ ಅವಕಾಶಗಳು' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.




ಹಳಿಯಾಳದ ಕೆಎಲ್‌ಎಸ್ ವಿಡಿಐಟಿ ಕಾಲೇಜಿನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಭಾರತೀಯ ವಾಯು ಸೇನೆಯ ನವದೆಹಲಿಯ ಗ್ರೂಪ್ ಕ್ಯಾಪ್ಟನ್ ಸಂಜಯ್ ದೇಸಾಯಿ ಮಾತನಾಡಿದರು

ಭಾರತೀಯ ವಾಯು ಸೇನೆಗೆ ಅರ್ಹರಾಗಲು ಎಫ್ ಕ್ಯಾಟ್, ಯುಪಿಎಸ್‌ಸಿ, ಎನ್‌ಸಿಸಿ ವಿಶೇಷ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಎಂದರು.

ಭಾರತೀಯ ವಾಯು ಸೇನೆಯ ಸಾಧನೆಗಳು ಹಾಗೂ ಸೇನೆಯು ಒದಗಿಸುವ ಸೌಲಭ್ಯಗಳ ಕುರಿತು ತಿಳಿಸಿದರು. ವಿದ್ಯಾರ್ಥಿಗಳು ತಮ್ಮ ಸಂದೇಹಗಳನ್ನು ಪರಿಹರಿಸಿಕೊಂಡರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ, ವಿದ್ಯಾರ್ಥಿಗಳು ಭಾರತೀಯ ಸೇನಾ ಪ್ರವೇಶಾತಿ ಪರೀಕ್ಷೆಗೆ ಉತ್ತಮ ಸಿದ್ಧತೆ ನಡೆಸಿ ಉತ್ತೀರ್ಣರಾಗಿ, ಸೇನೆಯಲ್ಲಿ ಸೇವೆ ಸಲ್ಲಿಸಿ ಎಂದರು.

ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್ ಸ್ವಾಗತಿಸಿದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗ, ಆವಿಷ್ಕಾರ ಪರಿಷತ್ತು ಮತ್ತು ಪ್ಲೇಸ್ಮೆಂಟ್ ಘಟಕದ ಜಂಟಿ ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. 29 ಯುಬಿಎಲ್ 2023-24
ದಿನಾಂಕ : 14-02-2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

# ವಾಯುಸೇನೆಯಲ್ಲಿದೆ ವಿಪುಲ ಅವಕಾಶ: ಕ್ಯಾ. ಸಂಜಯ್

**ಹಳಿಯಾಳ:** ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಭಾರತೀಯ ಸೇನೆಯಲ್ಲಿ ವಿಪುಲ ಅವಕಾಶವಿದ್ದು, ದೇಶ ರಕ್ಷಣೆಯ ಹಾಗೂ ದೇಶ ಸೇವೆಯ ಈ ಪವಿತ್ರವಾದ ಜವಾಬ್ದಾರಿಯನ್ನು ನಿಭಾಯಿಸಲು ಸದಾ ಸಿದ್ಧರಾಗಬೇಕು ಎಂದು ಗ್ರೂಪ್ ಕ್ಯಾಪ್ಟನ್ ಸಂಜಯ್ ದೇಸಾಯಿ ಹೇಳಿದರು.

ಪಟ್ಟಣದ ಕೆಎಲ್ಎಸ್ ಸಂಸ್ಥೆಯ ವಿಡಿಐಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ " ಭಾರತೀಯ ವಾಯುಸೇನೆಯಲ್ಲಿ ಭವಿಷ್ಯ ರೂಪಿಸಿಕೊಳ್ಳಲು ಇರುವ ಅವಕಾಶಗಳು" ಕುರಿತಾದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, ಭಾರತೀಯ ವಾಯುಸೇನೆಗೆ ಅರ್ಹರಾಗಲು ಎಫ್‌ಕ್ಯಾಟ್, ಯು.ಪಿ.ಎಸ್.ಸಿ ಹಾಗೂ ಎನ್.ಸಿ.ಸಿ ವಿಶೇಷ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಈ ಎಲ್ಲಾ ಪರೀಕ್ಷೆಗಳಿಗೆ ಕಠಿಣ ಪರಿಶ್ರಮದಿಂದ ಸಿದ್ಧತೆಯನ್ನು ಮಾಡಬೇಕು. ಭಾರತೀಯ ವಾಯುಸೇನೆಯ ಸಾಧನೆಗಳು ಹಾಗೂ ಸೇನೆಯು ಒದಗಿಸುವ ಸೌಲಭ್ಯಗಳ ಕುರಿತು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ವಹಿಸಿದ್ದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶ್ ವಿಭಾಗದ ಮುಖ್ಯಸ್ಥ ಡಾ.ಮಹೇಂದ್ರ ದೀಕ್ಷಿತ, ಟ್ರೈನಿಂಗ್ ಹಾಗೂ ಪ್ಲೇಸಮೆಂಟ್ ವಿಭಾಗದ ಸಂಚಾಲಕ ಪ್ರೊ.ರಜತ್ ಆಚಾರ್ಯ, ಪ್ರೊ.ಪೂಜಾ ಶಿಂದೆ ಹಾಗೂ ಇತರರು ಇದ್ದರು.




ಪಟ್ಟಣದ ಕೆ.ಎಲ್.ಎಸ್ ಸಂಸ್ಥೆಯ ವಿಡಿಐಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಭಾರತೀಯ ವಾಯುಸೇನೆ ನವದೆಹಲಿಯ ಗ್ರೂಪ್ ಕ್ಯಾಪ್ಟನ್ ಸಂಜಯದ ದೇಸಾಯಿ ಮಾತನಾಡಿದರು.